# ‘ಆಹಾರ ಕೊರತೆ ನೀಗಲು ಕಿರುಧಾನ್ಯ ಬೆಳೆಗೆ ಉತ್ತೇಜನ ಅಗತ್ಯ’

ಬೆಂಗಳೂರು, ಸೆ. 12: ದೇಶದಲ್ಲಿ ಆಹಾರ ಕೊರತೆ ನೀಗಿಸಲು ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಲ್ಲಿ ಕಿರುಧಾನ್ಯಗಳಿಗೆ ಆದ್ಯತೆ ನೀಡಬೇಕೆಂದು ಮಿಲ್ಲೆಟ್ ನೆಟ್‌ವರ್ಕ್ ಆಫ್ ಇಂಡಿಯಾ (ಮಿನಿ) ಸಂಚಾಲಕ ಪಿ.ವಿ. ಸತೀಶ್ ಪೈ ಕೇಂದ್ರಸರ್ಕಾರವನ್ನು ಒತ್ತಾಯಿಸಿದರು.

ಆಹಾರ ಕೊರತೆಯನ್ನು ನೀಗಿಸುವ ನಿಟ್ಟಿನಲ್ಲಿ ಕಿರುಧಾನ್ಯಗಳಾದ ಜೋಳ, ಸಜ್ಜೆ, ರಾಗಿ, ನವಣೆ, ಸಾವೆ, ಆರಕ, ಬರಗು ಸಮರ್ಥವಾಗಿವೆ. ಆದ್ದರಿಂದ ಆಹಾರ ಭದ್ರತೆಗೆ ನೀಡುವ ಬಜೆಟ್‌ನ ಶೇ.40 ರಷ್ಟನ್ನು ಕಿರುಧಾನ್ಯ ಆಧಾರಿತ ಕೃಷಿಗೆ ಮೀಸಲಿಡಬೇಕು ಎಂದು ಅವರು ಪತ್ರಿಕಾ ಗೋಷ್ಠಿಯಲ್ಲಿ ಆಗ್ರಹಿಸಿದರು.

ರಾಜ್ಯದಲ್ಲಿ ಪಡಿತರ ಧಾನ್ಯ ವಿತರಣಾ ವ್ಯವಸ್ಥೆಯಲ್ಲಿ ಕಿರುಧಾನ್ಯಗಳನ್ನು ಸೇರ್ಪಡೆ ಮಾಡಿಕೊಳ್ಳಬೇಕು. ಪ್ರಸ್ತುತ ವಿತರಿಸುತ್ತಿರುವ 25 ಕಿಲೋ ಆಹಾರ ಧಾನ್ಯದಲ್ಲಿ 5 ಕಿಲೋ ಕಿರುಧಾನ್ಯವನ್ನು ಸೇರಿಸಬೇಕೆಂದು ಅವರು ರಾಜ್ಯ ಸರ್ಕಾರಕ್ಕೆ ಸಲಹೆ ಮಾಡಿದರು.

ಜಾಗತಿಕ ಹವಾಮಾನ ಬದಲಾವಣೆ ಬಿಕ್ಕಟ್ಟಿಗೆ ಕಿರುಧಾನ್ಯಗಳು ಉತ್ತರ ನೀಡಲಿವೆ ಎಂಬುದನ್ನು ಬಿಂಬಿಸಿ ಇವುಗಳನ್ನು ಬೆಳೆಯಲು ಹಾಗೂ ಬಳಸಲು ಉತ್ತೇಜನ ನೀಡುವ ಸಂಬಂಧ ಯೋಜನೆಯನ್ನು ರೂಪಿಸಬೇಕೆಂದು ಹೇಳಿದರು.

ದೇಶದಲ್ಲಿ ಸಣ್ಣ, ಅತಿ ಸಣ್ಣ ರೈತರು ಮಳೆಯಾಶ್ರಿತ ಕೃಷಿಯನ್ನು ಅವಲಂಬಿಸಿದ್ದಾರೆ. ಸರ್ಕಾರವು ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ಇಂತಹ ರೈತರ ಉಳುಮೆ, ಕಳೆ ನಿರ್ಮೂಲನೆ, ಕೊಯ್ಲು ಮತ್ತಿತರೆ ಕೃಷಿ ಕಾರ್ಯಗಳಿಗೆ ಧನ ಸಹಾಯ ನೀಡಬೇಕೆಂದರು.

ರಾಜ್ಯದಲ್ಲಿ ಸುಮಾರು 4.2 ಲಕ್ಷ ಹೆಕ್ಟೇರ್‌ನಷ್ಟು ಜಮೀನು ಬೀಳು ಬಿದ್ದಿದೆ. ಈ ಜಮೀನಿನಲ್ಲಿ ವಾರ್ಷಿಕ 5 ಲಕ್ಷ ಟನ್‌ನಷ್ಟು ಕಿರು ಧಾನ್ಯ, 50 ಸಾವಿರ ಟನ್‌ನಷ್ಟು ಬೆಳೆ ಕಾಳು ಹಾಗೂ ಮೇವು ಉತ್ಪಾದನೆ ಸಾಧ್ಯವಿದೆ. ಆದ್ದರಿಂದ ಸರ್ಕಾರ ಈ ಜಮೀನನ್ನು ಕಿರುಧಾನ್ಯ ಕೃಷಿಗೆ ಪರಿವರ್ತಿಸಬೇಕೆಂದು ಒತ್ತಾಯಿಸಿದರು.

ಗೋಷ್ಠಿಯಲ್ಲಿ ಸಹಜ ಸಮೃದ್ಧದ ನಿರ್ದೇಶಕ ಜಿ. ಕೃಷ್ಣಪ್ರಸಾದ್ ಉಪಸ್ಥಿತರಿದ್ದರು.